

# ಕಳಿಂಗ ಯುದ್ಧದ ನೆನಪುಗಳ ರಂಗಸ್ಥಳ

**ಒಡಿಶಾದ ಲಿಂಗರಾಜ ದೇಗುಲ ಹರಿ–ಹರ ಸಮೀಕರಣದ ವಿಶಿಷ್ಟ ಸ್ಥಳ. ತನ್ನ ಅಗಾಧತೆ ಹಾಗೂ ವಿಶಿಷ್ಟ ವಾಸ್ತುಶಿಲ್ಪದಿಂದ ಪ್ರಸಿದ್ಧವಾದ ಈ ದೇಗುಲ, 'ಹಿಂದೂ ದೇಗುಲ'ಗಳ ಅತ್ಯುತ್ತಮ ಮಾದರಿಗಳಲ್ಲೊಂದು ಎಂದು ಹೇಳಲಾಗುತ್ತದೆ.**

**■ ಡಾ. ಎಂ. ವೆಂಕಟಸ್ವಾಮಿ**

ಒಡಿಶಾ ರಾಜ್ಯದ ರಾಜಧಾನಿ ಭುವನೇಶ್ವರದಲ್ಲಿರುವ ಲಿಂಗರಾಜ (ಶಿವನ) ದೇವಾಲಯ ಪ್ರವಾಸಿಗರ ಆಕರ್ಷಣೆಯ ತಾಣ. ಲಿಂಗರಾಜ, ಶಿವನ ಅಪ್ರತಿಮ ರೂಪವಾದ ಲಿಂಗಗಳ ರಾಜ. ಶಿವ–ಕೀರ್ತಿವಾಸ; ತ್ರಿಭುವನೇಶ್ವರನು ಸ್ವರ್ಗ, ಭೂಮಿ ಮತ್ತು ನರಕ ಮೂರೂ ಲೋಕಗಳ ಅಧಿಪತಿ. ಶಿವನ ಪತ್ನಿ ಪಾರ್ವತಿ ಭುವನೇಶ್ವರಿ. ದೊಡ್ಡ ಗೋಪುರದ ಕೆಳಗೆ ಗರ್ಭಗುಡಿಯಲ್ಲಿರುವ ಲಿಂಗರಾಜನನ್ನು ಶಿವ ಮತ್ತು ವಿಷ್ಣು ಎಂದು ಪೂಜಿಸಲಾಗುತ್ತದೆ. ಒಂದು ಕಾಲದಲ್ಲಿ ಶೈವ ಮತ್ತು ವೈಷ್ಣವ ಪಂಥಗಳು ಸಮೀಕರಣಗೊಂಡಿರುವುದು ಇಲ್ಲಿ ಕಂಡುಬರುತ್ತದೆ. ಎರಡೂ ದೇವತೆಗಳ ಸಂಯೋಜಿತ ರೂಪವನ್ನು ಇಲ್ಲಿ ಹರಿ–ಹರ ಎಂದು ಪೂಜಿಸಲಾಗುತ್ತದೆ.

ಪ್ರಸಿದ್ಧ ವಿಮರ್ಶಕ ಮತ್ತು ಇತಿಹಾಸಕಾರ ಜೇಮ್ಸ್ ಫರ್ಗ್ಯೂಸನ್ ಲಿಂಗರಾಜ ದೇವಾಲಯವನ್ನು 'ಭಾರತದ ಶುದ್ಧ ಹಿಂದೂ ದೇವಾಲಯಗಳ ಅತ್ಯುತ್ತಮ ಉದಾಹರಣೆಗಳಲ್ಲಿ ಒಂದಾಗಿದೆ' ಎಂದಿದ್ದಾರೆ. ವಿಶಾಲ ಸಮತಟ್ಟು ಪ್ರದೇಶದಲ್ಲಿ, ಲ್ಯಾಟರೈಟ್ (ಬುರುಜು)

## ಒಡಿಶಾದ ತ್ರಿಭುವನೇಶ್ವರ ದೇಗುಲ

ಕಲ್ಲುಗಳಲ್ಲಿ, 520 ಅಡಿಗಳ ಉದ್ದ ಮತ್ತು 465 ಅಡಿಗಳ ಅಗಲದ ಕಾಂಪೌಂಡ್ ಗೋಡೆ ಒಳಗೆ ದೇವಾಲಯಗಳ ದೊಡ್ಡ ಸಂಕೀರ್ಣವನ್ನೇ ನಿರ್ಮಿಸಲಾಗಿದೆ. ಗೋಡೆ 7.5 ಅಡಿ ದಪ್ಪವಿದ್ದು, ಓರೆಯಾದ ಕೋಪಿಂಗ್‌ನಿಂದ ನಿರ್ಮಿಸಲಾಗಿದೆ.

ಕಳಿಂಗ ವಾಸ್ತುಶಿಲ್ಪದ ಉತ್ತುಂಗದಂತಿರುವ ಮುಖ್ಯ ಗೋಪುರ 180 ಅಡಿ ಎತ್ತರವಿದೆ. ದೇವಾಲಯವನ್ನು ಮೊದಲಿಗೆ ಸೋಮವಂಶದ ರಾಜರು ನಿರ್ಮಿಸಿ, ನಂತರ ಗಂಗ ಅರಸರು ಇನ್ನಷ್ಟು ಅಭಿವೃದ್ಧಿಪಡಿಸಿದರು ಎನ್ನಲಾಗಿದೆ. ದೇವಾಲಯವನ್ನು 'ದೇವಲ' ಶೈಲಿಯಲ್ಲಿ ನಿರ್ಮಿಸಿದ್ದು, ನಾಲ್ಕು ಮುಖ್ಯ ಘಟಕ ಹೊಂದಿದೆ. ಗರ್ಭಗುಡಿ, ಜಗಮೋಹನ, ನಾಟ್ಯಮಂದಿರ ಮತ್ತು ಭೋಗ ಮಂಟಪ. ವಿಶಾಲವಾದ ಆವರಣದಲ್ಲಿ 108 ಶಿವಲಿಂಗಗಳ ಸಣ್ಣಪುಟ್ಟ ಗುಡಿಗಳಿವೆ. ಗೋಪುರಗಳ ಗೋಡೆಗಳ ಮೇಲೆ ನಾಲ್ಕೂ ದಿಕ್ಕುಗಳಲ್ಲಿ ಸಿಂಹಗಳು ಕುಳಿತಿರುವಂತೆ ಕೆತ್ತಲಾಗಿದೆ. ಲೆಕ್ಕವಿಲ್ಲದಷ್ಟು ಪ್ರಾಣಿಗಳು ಮತ್ತು ಸ್ತ್ರೀಯರ ವಿವಿಧ ಭಂಗಿಗಳ ಆಕೃತಿಗಳನ್ನು ಕೆತ್ತಲಾಗಿದೆ.

ಇಲ್ಲಿ ಮೂಲವಾಗಿ ಏಕಾಮ್ರದ (ಒಂಟಿ ಮಾವಿನ ಮರ) ಕೆಳಗೆ ಲಿಂಗರಾಜ ಗುಡಿ ಇದ್ದುದ್ದರಿಂದ ಈ ಪ್ರದೇಶಕ್ಕೆ 'ಏಕಾಮ್ರ ಕ್ಷೇತ್ರ' ಎಂಬ ಹೆಸರಿದೆ. ದೇವಾಲಯದಲ್ಲಿ ವಿಷ್ಣುವಿನ ವಿಗ್ರಹಗಳು ಇರುವುದನ್ನು ಗಮನಿಸಿದರೆ, 12ನೇ ಶತಮಾನದಲ್ಲಿ ಪುರಿ ಜಗನ್ನಾಥ ದೇವಾಲಯ ನಿರ್ಮಿಸಿದ ಗಂಗ ರಾಜರಿಂದ ವಿಷ್ಣುಪಂಥ ಚಾಲನೆಗೆ ಬಂದಿದೆ ಎನ್ನಬಹುದು. ಶಿವನನ್ನು ವಿಷ್ಣುವಿನ ಜೊತೆ ಸಮೀಕರಿಸಿದಂತೆ ತೋರುತ್ತದೆ. ಅಲ್ಲಿದ್ದ ಪಂಡಾ ಒಬ್ಬರಿಗೆ ದೇವಾಲಯದ ಬಗ್ಗೆ ಸ್ವಲ್ಪ ವಿವರಿಸುವಂತೆ ಕೇಳಿಕೊಂಡೆ. ಮುಖ್ಯ ಗೋಪುರದ ಮೇಲೆ ಶಿವನ ತ್ರಿಶೂಲದ ಬದಲು ತಾಮ್ರಬಣ್ಣದ ಉದ್ದನೆ ಬಿಲ್ಲು ಬಾಣ, ವಿಷ್ಣುಚಕ್ರ ಕಂಡು, 'ಇದೇನು ಶಿವನ ಗುಡಿ ಮೇಲೆ ಶ್ರೀರಾಮನ ಬಿಲ್ಲುಬಾಣ ಇದೆಯಲ್ಲ?' ಎಂದೆ. ಪಂಡಾ, 'ಶ್ರೀರಾಮನನ್ನು ಶಿವ, ಶಿವನನ್ನು ಶ್ರೀರಾಮ ಪ್ರಾರ್ಥಿಸುತ್ತಿದ್ದರಂತೆ' ಎಂದರು. 'ಶಿವ, ಶ್ರೀರಾಮನಿಗಿಂತ ಹಿಂದೆ ಇದ್ದವರಲ್ಲ ಎಂದೆ?' ಪಂಡಾ ಏನೋ ಹೇಳಲು ಹೊರಟರು.

